ದಿನಾಂಕ 13-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ಶ್ರೀ ಎಸ್.ಬಿ.ಕೆ ವಕೀಲರಿಂದಃ</u>**

ಸಾಕ್ಷಿಯು ದಿಃ 01-02-1996 ರ ಜಮೀನಿನ ಖರೀದಿಯ ಸಂಚಕಾರ ಪಾವತಿ ಪತ್ರವನ್ನು ಹಾಜರುಪಡಿಸಿದ್ದು ಅದರ ಮೇಲೆ ನ್ಯಾಯಾಲಯದ ಆದೇಶದ ಪ್ರಕಾರ ಕೊರತೆ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಕಟ್ಟಿದ ಮೇರೆಗೆ 1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಪಿ-15 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಖರೀದಿ ಕರಾರು ಪತ್ರವನ್ನು ಚನ್ನಬಸಪ್ಪ ಬ್ಯಾಲಾಳ ರವರು ಬರೆದು ಕೊಟ್ಟಿರುತ್ತಾರೆಂದು ಅವರ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಖರೀದ ಕರಾರು ಪತ್ರಕ್ಕೆ ಎಂ.ಸಿ.ಬ್ಯಾಲಾಳ, ವಿ.ಎಸ್. ಹಿರೇಮಠ, ಎಸ್.ವಿ. ಬಿದರಣ್ಣನವರ, ಕುಮಾರ ಬ್ಯಾಲಾಳ, ರಾಮಪ್ಪ ಬ್ಯಾಲಾಳ, ಕಲ್ಲಪ್ಪ ಬ್ಯಾಲಾಳ, ಶಂಬಣ್ಣ ಬ್ಯಾಲಾಳ, ಬಸವಣ್ಣೆಪ್ಪ ಬ್ಯಾಲಾಳ, ಸೋಮಣ್ಣ ನರೇಗಲ್, ಶಿವರಾಯಪ್ಪ ಬ್ಯಾಲಾಳ, ಪುಟ್ಟಪ್ಪ ಬ್ಯಾಲಾಳ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಿ.ಪಿ-15 ರ ಖರೀದಿ ಕರಾರು ಪತ್ರವನ್ನು ಬಿ.ಎಸ್ ಕಮರೊಳ್ಳಿ ರವರು ಬರೆದಿರುತ್ತಾರೆ.

**<u>ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಎಂ.ಪಿ.ಹೆಚ್ ವಕೀಲರಿಂದಃ</u>**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ

ಸಾಕ್ಷಿದಾರರ ಸಹಿ